**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 18/2022**

**ಪಿ.ಡಬ್ಲುಃ 1 ಸಿಡಬ್ಲುಃ 1**

| | | |
|---|---|---|
| ಸಾಕ್ಷಿಯ ಹೆಸರು | : | ಎ. ಕೆ. ವೆಂಕಟಸ್ವಾಮಿ |
| ತಂದೆ ಹೆಸರು | : | ಲೇಟ್ ಎ . ಕಾಟಯ್ಯ |
| ವಯಸ್ಸು | : | 49 ವರ್ಷ |
| ವೃತ್ತಿ | : | ಗ್ರಾಮ ಲೆಕ್ಕಾಧಿಕಾರಿ ಎತ್ತಿನಬೂದಿಹಾಳ್ ಗ್ರಾಮ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **10-08-2022**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಮ್ಮ ಮನೆ ಕೋಟ್ ಮೆಹಲಾ , ಮಿಲ್ಲರ್ ಪೇಟೆ , ಬಳ್ಳಾರಿಯಲ್ಲಿ ಇರುತ್ತದೆ . ಚಾಸಾ-8 ನನ್ನ ಹೆಂಡತಿ . ಚಾಸಾ-9 ರಿಂದ 11 ನನ್ನ ಮಕ್ಕಳು . ಚಾಸಾ-12 ನನ್ನ ತಮ್ಮನ ಹೆಂಡತಿ . ಚಾಸಾ-13 ನನ್ನ ತಮ್ಮ . ನನಗೆ ಆರೋಪಿತರ ಪರಿಚಯ ಇರುತ್ತದೆ . ಸದರಿ ಆರೋಪಿತರು ನಮ್ಮ ಮನೆಯ ಮುಂದಿನ ಮನೆಯಲ್ಲಿ ವಾಸವಿರುತ್ತಾರೆ .

ನಾನು ಎತ್ತಿನಭೂದಿಹಾಳ್ ಗ್ರಾಮದಲ್ಲಿ 8 ವರ್ಷದಿಂದ ಗಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ . ದಿಃ 29-11-2021 ರಂದು ಒಂದು ವಾರದ ಮಟ್ಟಿಗೆ ಆರ್ . ಐ ಎಂದು ಇನ್ ಚಾರ್ಜ್ ಆಗಿ ರೂಪನಗುಡಿ ಹೋಬಳಿಗೆ ಕೆಲಸ ನಿರ್ವಹಿಸಿರುತ್ತೇನೆ . ದಿಃ 30-11-2021 ರಂದು ತೋಳಮಾಮುಡಿ ಗ್ರಾಮದ ತಳವಾರ ವಿರೇಶ್ ಫೋನ್ ಮಾಡಿ ಕೆಲವು ದಂಗೆಕೋರರು ಆತನ ಮೇಲೆ ಹಲ್ಲೆ ಮಾಡುತ್ತಿರುವಾಗಿ ಬರಬೇಕೆಂದು ತಿಳಿಸಿದರು . ಈ ವಿಷಯ ನಾನು ನಮ್ಮ ಮೇಲಾಧಿಕಾರಿಗೆ ತಿಳಿಸಿರುತ್ತೇನೆ . ನಮ್ಮ ಮೇಲಾಧಿಕಾರಿ ಗ್ರಾಮಲೆಕ್ಕಾಧಿರಿಯನ್ನು ಕರೆದುಕೊಂಡು ಹೋಗುವಂತೆ ತಿಳಿಸಿದ ಮೇರೆಗೆ ನಾನು ಗಣೇಶ್ ಮತ್ತು ಹಳ್ಳಿಮಂಜುನಾಥ ರವರನ್ನು ಕರೆದುಕೊಂಡು ರಾಃ 8-30 ಗಂಟೆಗೆ ತಾಲೂಕು ಆಫೀಸ್ ನಿಂದ ಬಿಟ್ಟು ತೋಳಮಾಮುಡಿ ಗ್ರಾಮಕ್ಕೆ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇನೆ. ನಾವು ಸದರಿ ಗ್ರಾಮಕ್ಕೆ ರಾಃ 9-30 ಕ್ಕೆ ಹೋಗಿ ತಲುಪಿರುತ್ತೇವೆ . ನಾನು ರಾಃ 10-00 ಗಂಟೆವೆರಗೆ ಸದರಿ ಸ್ಥಳದಲ್ಲಿದ್ದಾಗ ಎರಡು ಟ್ರ್ಯಾಕ್ಟರಗಳು ಬಂದು ಮರಳನ್ನು ತುಂಬಿಕೊಂಡು ಹೋಉರುತ್ತಾರೆ . ಆಗ ನಾನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಅವರು ಗಣಿಗಾರಿಕೆ ಇಲಾಖೆಗೆ ತಿಳಿಸಬೇಕೆಂದು ಹೇಳಿದರು . ನಂತರ ನಾನು ಸದರಿ ವಿಷಯವನ್ನು ಫೋನ್ ಮಾಡಿ

ತಿಳಿಸಿದಾಗ ಅವರು ಲೋಕೇಷನ್ ಕೇಳಿದ ಮೇರೆಗೆ ನಾನು ಲೋಕೇಷನ್ ಶೇರ್ ಮಾಡಿರುತ್ತೇನೆ.

ಗಣಿಗಾರಿಕೆ ಇಲಾಖೆಯವರು 20 ನಿಮಿಷಗಳಲ್ಲಿ ತಮ್ಮ ಇಲಾಖಾ ವಾಹನದಲ್ಲಿ ಸ್ಥಳಕ್ಕೆ ಬಂದರು. ನಂತರ ನಾವು ಸದರಿ ಅಧಿಕಾರಿಗಳಿಗೆ ಒಬ್ಬ ಹೋಮ್ ಗಾರ್ಡ ನನ್ನು ಕಳುಹಿಸಿಕೊಡಲು ಕೇಳಿ ಆತನೊಂದಿಗೆ ನಾನು ಮುಂದೆ ಹೋಗಿ ವಿಷಯ ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿರುತ್ತೇನೆ. ಆಗ ನಾನು ಹೋಗಿ ನೋಡಲಾಗಿ ಎರಡು ಟ್ರ್ಯಾಕ್ಟರ್ ನ ಎರಡು ಟ್ರೈಲರ್ ನಲ್ಲಿ ಮರಳನ್ನು ತುಂಬಿದಾಗ ನಾನು ದೂರದಲ್ಲಿರುವ ಗಣಿಗಾರಿಕೆ ಇಲಾಖೆಗೆ ಅಧಿಕಾರಿಗೆ ಫೋನ್ ಮಾಡಿ ತಿಳಿಸಿದಾಗ ಅವರು ಬಂದು ಟ್ರ್ಯಾಕ್ಟರ್ ನ್ನು ವಶಕ್ಕೆಪಡಿಸುವಷ್ಟರಲ್ಲಿ 25-30 ಜನರ ಗುಂಪು ನಮ್ಮನ್ನು ಸುತ್ತುವರೆದರು. ಆಗ ಗಣಿಗಾರಿಕೆಯ ಅಧಿಕಾರಿ ನವೀನ್ ಇತನು 112 ಗೆ ಕರೆ ಮಾಡಿದರು. ಅಷ್ಟರಲ್ಲಿ ಪೋಲೀಸರು ಸ್ಥಳಕ್ಕೆ ಬಂದಾಗ ಎಲ್ಲಾ ಜನರು ಓಡಿ ಹೋಗಿರುತ್ತಾರೆ.

ನಂತರ ಗಣಿಗಾರಿಕೆ ಇಲಾಖೆಯವರು ಎರಡು ವಾಹನಗಳನ್ನು ಜಪ್ತುಗೊಳಿಸಿದ ಮೇಲೆ ನಾನು ಮರಳಿ ನಮ್ಮ ಮನೆಗೆ ಹೋಗಬೇಕೆಂದಾಗ ನನ್ನ ವಾಹನದ ಪ್ಲಗ್ ತೆಗೆದಿದ್ದು ಹಾಗೂ ಎರಡು ಗಾಲಿಯ ಗಾಳಿಯನ್ನು ತೆಗೆದಿರುತ್ತಾರೆ. ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿಗೆ ತಿಳಿಸಿರುತ್ತೇನೆ. ಗ್ರಾಮಲೆಕ್ಕಾಧಿಕಾರಿ ಗಣೇಶ್ ಇತನು ಬಳ್ಳಾರಿ ಗ್ರಾಮೀಣ ಪೊ. ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ.

ನಂತರ ದಿಃ 01-12-2021 ರಂದು ಸಂಃ 7-30 ರ ಸಮಯದಲ್ಲಿ ನಾನು ಮತ್ತು ನನ್ನ ತಮ್ಮ ಚಾಸಾ-13 ರವರು ದ್ವಿಚಕ್ರ ವಾಹನದಲ್ಲಿ ಬಳ್ಳಾರಿಯ ಆನಂತಪುರ ರಸ್ತೆಯಲ್ಲಿ ಇರುವ ಹೊಯಸಳ ಹೋಟೇಲ್ ಹತ್ತಿರ ಹೋಗುತ್ತಿರುವಾಗ ಮೊಕಬುಲ್ ಬಂದು ನನ್ನ ಕಡೆ ತಪ್ಪಾಗಿ ಇರುತ್ತದೆ ಎಂದು ಕ್ಷಮೆ ಕೇಳಿದನು. ಆಗ ನಾನು ರಾತ್ರಿ ಸಮಯದಲ್ಲಿ ನನಗೆ ಹೇಗೆ ನನ್ನ ಟ್ರ್ಯಾಕ್ಟರ್ ಗಳನ್ನು ಹಿಡಿಯುತ್ತೀಯ ಎಂದು ಬೆದರಿಕೆ ಹಾಕಿದ್ದು, ಈಗ ಕ್ಷಮೆ ಕೇಳುತ್ತೀಯಾ ಎಂದು ಹೇಳಿದೆನು. ನಂತರ ನಾನು ಮನೆಗೆ ಬಂದಾಗ ರಾಃ 8-30 ರ ಸಮಯಕ್ಕೆ ಮಕ್ ಬುಲ್ ಇತನು ಕುಳ್ಳಾರಫೀಕ್, ಇಲಿಯಾಸ್, ಹಮೀದ್, ಆರೀಫ್, ಮೊಹಮ್ಮದ್ ಗೌಸ, ತೌಸೀಫ್, ತಸ್ಲಿಮ್, ಸೇನಾಜ್ ಬೇಗಂ, ಅಪ್ಸರಾ, ಸೋಫೀಯಾ, ಬೀ ಬೀ ಜಾನ್, ಸಲ್ಲು ಎಲ್ಲರೂ ಸೇರಿ ಬ್ಯಾಟ್, ಹಾಕಿಸ್ಟಿಕ್, ಲಾಂಗ್ ಗಳನ್ನು ತೆಗೆದುಕೊಂಡು ನಮ್ಮ ಮನೆಗೆ ಬಂದರು. ಮಕ್ ಬುಲ್

ಇತನು ನನ್ನ ಮಗ ಅಜಯ್ ಕುಮಾರ್ ನಿಗೆ ಲಾಂಗ್ ನಿಂದ ಹೊಡೆಯಲು ಬಂದಾಗ ಬಲಕೈಗೆ ಏಟು ಬಿದ್ದಿತು . ನನ್ನ ಹೆಂಡತಿಗೆ ತೌಸಿಫ್ ಇತನು ಲಾಂಗ್ ನಿಂದ ಹೊಡೆಯಲು ಹೋದಾಗ ಅವಳ ಬಲಗೈ ನಡುಬೆರಳಿಗೆ ಏಟು ಬಿದ್ದಿತು . ನಂತರ ನನಗೆ ಮೆಕ್ ಬುಲ್ ಇತನು ಲಾಂಗ್ ನಿಂದ ಎಡಗೈನ ಹೆಬ್ಬೆರಳು ಮತ್ತು ತೋರ್ ಬೆರಳು ಮಧ್ಯದಲ್ಲಿ ಹಾಕಿದಾಗ ತೀವ್ರ ಗಾಯವಾಗಿರುತ್ತದೆ . ಕುಳ್ಳ ರಫೀಕ ಇತನು ಸೂಳೇ ಮಗನೆ ನಿನ್ನನ್ನು ಇವತ್ತು ಫೀನಿಸ್ ಮಾಡುತ್ತೇನೆ ಎಂದು ಹೇಳಿದನು . 16 ಜನ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿಯೂ ನನ್ನ ಮಗ ಎ . ಕೆ. ವಿಜಯ ಕುಮಾರನಿಗೆ ಮೂಗಿನ ಮೇಲೆ ಮುಷ್ಟಿ ಮಾಡಿ ಗುದ್ದಿದನು .

ನಂತರ ಅಪ್ಸರಾ , ಬೀ ಬೀ ಜಾನ, ಸೈನಾಜ್ , ತಸ್ಲಿಮ್ , ಸೋಫೀಯಾ ಇವರು ನನ್ನ ಹೆಂಡತಿ ಮತ್ತು ನನ್ನ ತಮ್ಮನ ಹೆಂಡತಿ ಎ . ಕೆ. ಚಂದ್ರಕಲಾ ಇವರ ಕೂದಲನ್ನು ಹಿಡಿದು ಕಾಲಿನಿಂದ ಹೊಡೆದರು . ನಂತರ ನನ್ನ ಹೆಂಡತಿಯ 5 ತೊಲೆ ಬಂಗಾರದ ಚೈನ್ ಮತ್ತು ನನ್ನ ತಮ್ಮನ ಹೆಂಡತಿ ಚಂದ್ರಕಲಾ ಇವರ 2 ತೊಲೆ ಚೈನ್ ನ್ನು ಕಿತ್ತುಕೊಂಡಿರುತ್ತಾರೆ . ಈ ಗಲಾಟೆಯಾಗುವ ಸಮಯದಲ್ಲಿ ಚಾಸಾ-14 ರಿಂದ 17 ರವರು ಬಂದು ನಮ್ಮನ್ನು ಕಾಪಾಡಿರುತ್ತಾರೆ .

ಚಾಸಾ-14 ರಿಂದ 17 ರವರು ಮತ್ತು ಚಾಸಾ-13 ರವರು ನಮ್ಮನ್ನು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆರೋಪಿತರು ನಮ್ಮ 3 ದ್ವಿಚಕ್ರ ವಾಹನವನ್ನು ಜಖಂಗೊಳಿಸಿರುತ್ತಾರೆ . ನಾನು ನಡೆದ ಘಟನೆಯನ್ನು ನಮ್ಮ ಮನೆಯಲ್ಲಿರುವಾಗ ನಮ್ಮ ಮೇಲಾಧಿಕಾರಿಗೆ ಪೋನ್ ಮಾಡಿ ವಿಷಯ ತಿಳಿಸಿರುತ್ತೇನೆ .

ಸದರಿ ವಿಷಯವನ್ನು ಪೊಲೀಸರಿಗೆ ನಮ್ಮ ಮೇಲಾಧಿಕಾರಿಗೆ ತಿಳಿಸಿದ ಮೇರೆಗೆ ನಾನು ಓಪಿಡಿಯಲ್ಲಿರುವಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಈಗ ನೋಡುತ್ತಿರುವ ಹೇಳಿಕೆಯನ್ನು ಕೊಟ್ಟಿರುತ್ತೇನೆ . ಸದರಿ ಹೇಳಿಕೆಯಲ್ಲಿರುವ ಸಹಿಗಳನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು ನಿಪಿ-1 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು .

ನಾನು ಆಸ್ಪತ್ರೆಯಲ್ಲಿ ನನ್ನ ಕೈಗೆ ಗಾಯವಾದ ಬಗ್ಗೆ ಚಿಕಿತ್ಸೆ ಪಡೆದಿರುತ್ತೇನೆ . ನನ್ನ ಕೈಗೆ ಫ್ರಾಕ್ಚರ್ ಆಗಿರುತ್ತದೆ . ನಾನು ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ . ನಾನು ಆಸ್ಪತ್ರೆಯಿಂದ ಡಿಸ್ ಚಾರ್ಜ ಆಗಿ ಬಂದ 25 ದಿನಗಳ ನಂತರ ಪೊಲೀಸರು ನನ್ನನ್ನು

ಮ್ಯಾಜಿಸ್ಟ್ರೇಟ್ ಎದುರಿಗೆ ಕರೆದುಕೊಂಡು ಹೋಗಿದ್ದು ನಾನು ಅವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ .

( ಈ ಹಂತದಲ್ಲಿ ಲಕೋಟೆಯಲ್ಲಿರುವ ಹೇಳಿಕೆಯನ್ನು ತೆರೆದು ನೋಡಲು ಪಿ . ಪಿ ಅವರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು).

ಸಾಕ್ಷಿಯೂ ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-2(ಎ), 2(ಬಿ) ಮತ್ತು 2(ಸಿ) ಎಂದು ಗುರುತಿಸಲಾಯಿತು . ಆರೋಪಿತರು ಆ ದಿನ ನಮ್ಮನ್ನು ಹೊಡೆಯಲು ಉಪಯೋಗಿಸಿದ ಮಾರಕಾಸ್ತ್ರಗಳನ್ನು ನೋಡಿದರೆ ಗುರುತಿಸುತ್ತೇನೆ .

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಮಾನ್ಯ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಸಾಕ್ಷಿಯೂ 3 ಮಚ್ಚುಗತ್ತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ರಿಂದ 3 ಎಂದು , ಸಾಕ್ಷಿಯೂ ಒಂದು ಬೇಸ್ಬಾಲ್ ಬ್ಯಾಟ್ ಮು.ಮಾ-4 ಎಂದು , ಸಾಕ್ಷಿಯೂ ಒಂದು ಹಾಕಿಬ್ಯಾಟ್ ಮು.ಮಾ-5 ಎಂದು , ಸಾಕ್ಷಿಯೂ ಒಂದು ಸ್ಟಿಕ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-6 ಎಂದು ಗುರುತಿಸಲಾಯಿತು .

ಘಟನೆಯ ದಿನ ನಾನು ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ .

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಮಾನ್ಯ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ನೀಲಿ ಬಣ್ಣದ ಒಂದು ಶರ್ಟ್ ನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅದನ್ನು ಮು.ಮಾ-7 ಎಂದು , ಗ್ರೇ ಬಣ್ಣದ ಪ್ಯಾಂಟ್ ನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅದನ್ನು ಮು.ಮಾ-8 ಎಂದು , ಸಾಕ್ಷಿಯೂ ಒಂದು ಬಿಳಿ ಬಣ್ಣದ ಬನಿಯನ್ ನೋಡಿ ಗುರುತಿಸಿದ್ದು ಅದನ್ನು ಮು.ಮಾ-9 ಎಂದು ಗುರುತಿಸಲಾಯಿತು . ಘಟನೆಯ ದಿನ ನನ್ನ ಹೆಂಡತಿ ಧರಿಸಿದ್ದ

ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯೂ ನೇರಳೆ ಬಣ್ಣದ ಸೀರೆಯನ್ನು ಗುರುತಿಸಿದ್ದು ಅದನ್ನು ಮು.ಮಾ-10 ಎಂದು, ಸಾಕ್ಷಿಯೂ ಒಂದು ಬಿಳಿ ಬಣ್ಣದ ಕೈ ವಸ್ತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಮು-ಮಾ-11 ಎಂದು ಗುರುತಿಸಲಾಯಿತು .

ಘಟನೆಯ ಸಮಯದಲ್ಲಿ ನಮ್ಮ ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರುವುದರಿಂದ ಆರೋಪಿತರನ್ನು ನಾನು ನೋಡಿರುತ್ತೇನೆ . ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ ಎಲ್ಲಾ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ .

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ . 500 ಖರ್ಚಿನೊಂದಿಗೆ ಮುಂದೂಡಲಾಯಿತು .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

## 2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 18/2022

ಪಿ.ಡಬ್ಲುಃ 2 ಸಿಡಬ್ಲುಃ8

ಸಾಕ್ಷಿಯ ಹೆಸರು : ಸರಸ್ವತಿ

ತಂದೆ ಹೆಸರು : ಎ . ಕೆ . ವೆಂಕಟಸ್ವಾಮಿ

ವಯಸ್ಸು : 40 ವರ್ಷ

ವೃತ್ತಿ : ಗೃಹಿಣಿ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 10-08-2022

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

(ಸಾಕ್ಷಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಗೊತ್ತಿಲ್ಲದ ಕಾರಣ ಕುಮಾರಿ ಎ . ಎಂ . ಪಿ ವಕೀಲರನ್ನು ಭಾಷಾಂತರಕಾರರನ್ನಾಗಿ ನ್ಯಾಯಾಲಯದ ಸಹಾಯಕ್ಕೆ ಪಡೆದುಕೊಳ್ಳಲಾಯಿತು).

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು .

ಚಾಸಾ-1 ನನ್ನ ಗಂಡ . ಚಾಸಾ-9 ರಿಂದ 11 ನನ್ನ ಮಕ್ಕಳು . ಚಾಸಾ-12 ರವರು ನನ್ನ ಮೈದುನನ ಹೆಂಡತಿ . ಚಾಸಾ-13 ನನ್ನ ಮೈದುನಾ . ನಾವು ಬಳ್ಳಾರಿಯ ಮಿಲ್ಲರ್ ಪೇಟೆಯಲ್ಲಿ ವಾಸಮಾಡುತ್ತೇವೆ . ನಾನು ಆರೋಪಿತರನ್ನು ನೋಡಿರುತ್ತೇನೆ . ಅವರು ನಮ್ಮ ಮನೆಯ ಎದುರಿನ ಮನೆಯಲ್ಲಿ ವಾಸವಾಗಿರುತ್ತಾರೆ .

ಚಾಸಾ-1 ರವರು ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಾರೆ . ದಿಃ 01-12-2021 ರಂದು ನಮ್ಮ ಮನೆಗೆ ಆರೋಪಿತರೆಲ್ಲಾ ಸೇರಿಕೊಂಡು ರಾಃ 8-00 ಗಂಟೆಗೆ ಬಂದರು . ಆ ಸಮಯದಲ್ಲಿ ನಾನು ನನ್ನ ಗಂಡ , ನನ್ನ ಮೂರು ಜನ ಮಕ್ಕಳು ಮತ್ತು ನನ್ನ ಮೈದುನನ ಹೆಂಡತಿ ಮನೆಯಲ್ಲಿ ಇದ್ದೆವು . ಮಕ್ ಬುಲ್ ಇತನು ನನ್ನ ಗಂಡನಿಗೆ ಕೈಯಲ್ಲಿ ಕತ್ತಿಯಂತ ಆಯುದವನ್ನು ಹಿಡಿದುಕೊಂಡು ಹೊಡೆಯಲು ಹೋದನು . ಆಗ ನನ್ನ ಮಗ ಮತ್ತು ನಾವೆಲ್ಲಾ ಅಡ್ಡ ಹೋದಾಗ ನನ್ನ ಮಗ ಅಜಯ್ ಕುಮಾರನ ಕೈಗೆ ಕತ್ತಿಯಿಂದ ಗಾಯವಾಯಿತು . ನಂತರ ಕತ್ತಿಯಿಂದ ನನಗೂ ಸಹ ಬಲಗೈ ನಡುಬೆರಳಿಗೆ ಗಾಯವಾಯಿತು . ನನ್ನ ಗಂಡನಿಗೆ ಎಡಗೈಗೆ ಗಾಯವಾಯಿತು . ನನ್ನ ಮಗ ವಿಜಯ್ ಕುಮಾರನಿಗೆ ಮುಷ್ಟಿಯಿಂದ ಒಬ್ಬ

ಆರೋಪಿಯೂ ಮೂಗಿಗೆ ಗುದ್ದಿದನು . ನನ್ನ ಮಗ ಆದಿನಾರಾಯಣ ಮತ್ತು ನನ್ನ ಮೈದುನನ ಹೆಂಡತಿಯ ಮೇಲೆ ಹಲ್ಲೆ ಮಾಡಿದರು .

ನಮ್ಮ ಮನೆಯ ಅಕ್ಕ ಪಕ್ಕದ ಮನೆಯವರು ನಮ್ಮನೆಲ್ಲಾ ಓಪಿಡಿ ಆಸ್ಪತ್ರೆಗೆ ಕರೆದುಕೊಂಡು ಹೋದರು . ಸೋಮವಾರದ ದಿನ ನನ್ನ ಗಂಡ ಆರ್ . ಐ ಹುದ್ದೆಯ ಪ್ರಭಾರಿ ಕೆಲಸ ಮಾಡುತ್ತಿದ್ದು , ಮಂಗಳವಾರ ರಾತ್ರಿ 8-00 ಗಂಟೆಗೆ ಕರ್ತವ್ಯದ ಮೇಲೆ ಕೆಲಸಕ್ಕೆ ಹೋಗಿದ್ದರು . ತೋಳಮಾಮುಡಿ ಗ್ರಾಮದ ಮರಳು ತೆಗೆದುಕೊಂಡು ಹೋಗುವ ವಿಷಯದಲ್ಲಿ ಅವರ ಮೇಲೆ ಹಲ್ಲೆ ಆಗಿತ್ತು . ನನ್ನ ಗಂಡ ನಮ್ಮ ಮನೆಯ ಎದುರುಗಡೆ ಇರುವ ಮಕ್ ಬುಲ್ ಇತನು ನನ್ನ ಟ್ರ್ಯಾಕ್ಟರ್ ಲಾರಿಗಳನ್ನು ತಡೆಯುತ್ತೀಯ ಎಂದು ಹೆದಿರಿಸುತ್ತಾನೆ ಎಂದು ನನಗೆ ತಿಳಿಸಿದ್ದರು .

ಆ ದಿನ ಆರೋಪಿಗಳು ನಮ್ಮ ಮೇಲೆ ಹಲ್ಲೆ ಮಾಡಲು ಬಳಸಿದ ಮಾರಕಾಸ್ತ್ರ ಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯೂ ಮು.ಮಾ-1 ರಿಂದ 6 ರನ್ನು ನೋಡಿ ಗುರುತಿಸುತ್ತಾರೆ . ಸಾಕ್ಷಿಯೂ ಮು.ಮಾ-10 ನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ . ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ . ಘಟನೆಯಾದ 3 ತಿಂಗಳ ನಂತರ ಈ ಕೇಸಿನ ಬಗ್ಗೆ ನ್ಯಾಯಾಲಯದ ಆವರಣದಲ್ಲಿರುವ ಇನ್ನೊಂದು ನ್ಯಾಯಾಲಯದಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ . ನ್ಯಾಯಾಲಯದಲ್ಲಿ ನಾನು ಹೇಳಿದಂತೆ ನನ್ನ ಹೇಳಿಕೆಯನ್ನು ನ್ಯಾಯಾಧೀಶರು ಕನ್ನಡದಲ್ಲಿ ಬರೆದುಕೊಂಡಿರುತ್ತಾರೆ .

( ಈ ಹಂತದಲ್ಲಿ ಲಕೋಟೆಯಲ್ಲಿರುವ ಹೇಳಿಕೆಯನ್ನು ತೆರೆದು ನೋಡಲು ಪಿ . ಪಿ ಅವರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು).

ಸದರಿ ಹೇಳಿಕೆಯಲ್ಲಿರುವ ಸಹಿಯನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು , ಹೇಳಿಕೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು 3(ಬಿ) ಎಂದು ಗುರುತಿಸಲಾಯಿತು .

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ . 500 ಖರ್ಚಿನೊಂದಿಗೆ ಮುಂದೂಡಲಾಯಿತು .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 18-2022

ಪಿ.ಡಬ್ಲ್ಯುಃ 3 ಸಿಡಬ್ಲ್ಯುಃ 9

ಸಾಕ್ಷಿಯ ಹೆಸರು : ಅಜಯ್ಯ ಕುಮಾರ್

ತಂದೆ ಹೆಸರು : ಎ . ಕೆ . ವೆಂಕಟಸ್ವಾಮಿ

ವಯಸ್ಸು : 18 ವರ್ಷ

ವೃತ್ತಿ : ವಿದ್ಯಾರ್ಥಿ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 10-08-2022

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಚಾಸಾ-1 ನನ್ನ ತಂದೆ . ಚಾಸಾ-8 ನನ್ನ ತಾಯಿ . ಚಾಸಾ-10 ಮತ್ತು 11 ನನ್ನ ಸಹೋದರರು . ಚಾಸಾ-12 ನನ್ನ ಚಿಕ್ಕಮ್ಮ . ಚಾಸಾ-13 ನನ್ನ ಚಿಕ್ಕಪ್ಪ . ನಾವೆಲ್ಲರೂ ಬಳ್ಳಾರಿಯ ಮಿಲ್ಲರ್ ಪೇಟೆಯಲ್ಲಿ ವಾಸ ಮಾಡುತ್ತೇವೆ . ನನಗೆ ಆರೋಪಿತರೆಲ್ಲರೂ ಪರಿಚಯ , ಅವರು ನಮ್ಮ ಮನೆಯ ಮುಂದಿರುವ ಮನೆಯಲ್ಲಿ ವಾಸವಾಗಿರುತ್ತಾರೆ . ನನ್ನ ತಂದೆ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ .

ದಿಃ 30-11-2021 ರಂದು ನನ್ನ ತಂದೆ ತನ್ನ ಕರ್ತವ್ಯಕ್ಕೆ ಹೋದಾಗ ಮಕ್ ಬುಲ್ ಆರೋಪಿಯೂ ಆತನ ಮೇಲೆ ಬೆದರಿಕೆಹಾಕಿದ್ದು , ನನ್ನ ತಂದೆ ಕರ್ತವ್ಯದಿಂದ ಬೆಳಗಿನ 3-00 ಗಂಟೆಗೆ ಮನೆಗೆ ಬಂದಾಗ ನನ್ನ ತಾಯಿ ಬಾಗಿಲು ತೆಗೆದಳು . ಆಗ ನನ್ನ ತಂದೆ ಮಕ್ ಬುಲ್ ನು ನಮಗೆ ಹೆದರಿಕೆ ಹಾಕಿ ನಮ್ಮ ಟ್ರ್ಯಾಕ್ಟರ್ ಲಾರಿಗಳನ್ನು ಹೇಗೆ ತಡೆಯುತ್ತೀಯ ಎಂದು ಕೇಳಿದನು ಎಂದು ನನ್ನ ತಾಯಿಗೆ ಹೇಳುತ್ತಿದ್ದನು .

ದಿಃ 01-12-2021 ರಂದು ನಾನು ಸಂಃ 4-30 ಗಂಟೆಗೆ ಕಾಲೇಜಿನಿಂದ ಮರಳಿ ಬಂದು ಮನೆಯಲ್ಲಿದ್ದೆನು , ರಾಃ 8-00 ಗಂಟೆ ಸಮಯದಲ್ಲಿ ಆರೋಪಿತರು ಎಲ್ಲಾ ಸೇರಿ ನಮ್ಮ ಮೇಲೆ ಹಲ್ಲೆ ಮಾಡಿದರು . ಸದರಿ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು , ಚಾಸಾ-1, ಚಾಸಾ-8, 10 ರಿಂದ 12 ರವರು ಇದ್ದೆವು . ಮಕ್ ಬುಲ್ , ತೌಸಿಫ್ ಇವರು ಲಾಂಗ್ ನ್ನು ತೆಗೆದುಕೊಂಡು ಬಂದಿದ್ದು , ಆರೀಫ್ , ಹಮಿದ್ , ಮೊಹಮ್ಮದ್ , ಗೌಸ್ ಇವರೆಲ್ಲರೂ ಹಾಕಿಸ್ಟಿಕ್ ಕ್ರಿಕೇಟ್ ಸ್ಟಮ್ ಹಿಡಿದುಕೊಂಡು ಬಂದಿದ್ದರು . ನನ್ನ ತಂದಗೆ ಹೊಡೆಯಲು ಪ್ರಯತ್ನಿಸಿದಾಗ ನಾನು ಮತ್ತು ಮತ್ತು ಚಾಸಾ-8 ರವರು ಅಡ್ಡ ಬಂದು ಕೈ ಹಾಕಿದಾಗ ನನ್ನ

ತಾಯಿಗೂ ಮತ್ತು ನನಗೆ ಏಟು ಬೀಳುತ್ತದೆ. ನನ್ನ ಬಲಗೈಗೆ ಗಾಯವಾಗಿರುತ್ತದೆ . ನನ್ನ ತಾಯಿಗೆ ಬಲಗೈನ ಮಧ್ಯದ ಬೆರಳಿಗೆ ಗಾಯವಾಗಿರುತ್ತದೆ . ಅಫ್ಸರಾ , ತಸ್ಲಿಮ್ , ಸೈನಾಜ್ , ಸೋಫೀಯಾ ಇವರೆಲ್ಲಾ ನನ್ನ ತಾಯಿ ಮತ್ತು ಚಿಕ್ಕಮ್ಮಳಿಗೆ ತಲೆಕೂದಲನ್ನು ಹಿಡಿದು ಎಳೆದಾಡಿ ಬಂಗಾರದ ಆಭರಣಗಳನ್ನು ಎಳೆದುಕೊಂಡರು . ನನ್ನ ತಾಯಿಯ ಆಭರಣ 5 ತೊಲೆಯದಾಗಿದ್ದು , ಚಿಕ್ಕಮ್ಮನ ಆಭರಣ 2 ತೊಲೆಯದಾಗಿತ್ತು.

ಕುಳ್ಳಾ ರಫೀಯೂ ನನ್ನ ತಂದೆಯ ಶರ್ಟ್ ನ ಕಾಲರ್ ನ್ನು ಹಿಡಿದು ಎಳೆದು ಲೌಡೆಕ್ ಬಾಲ್ ಎಂದು ಮತ್ತು ನೀವು ಸರ್ಕಾರಿ ಅಧಿಕಾರಿಗಳು ನಮ್ಮ ಮೇಲೆ ಅವಾಚ್ಯ ಶಬ್ದಗಳಿಂದ ಬೈದರು . ನಮ್ಮ ಮನೆಯ ಅಕ್ಕ ಪಕ್ಕದವರಾದ ರಾಘವೇಂದ್ರ, ಅಜಿಮ್ , ಮಾರುತಿ ಎಲ್ಲರೂ ಬಂದು ನಮ್ಮನ್ನು ವಿಮ್ಸ್ ಆಸ್ಪತ್ರೆಯ ಓಪಿಡಿಗೆ ಕರೆದುಕೊಂಡು ಹೋದರು . ಆರೋಪಿಗಳ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿಯೂ ಚಾಸಾ-10 ರವರಿಗೆ ಕೈ ಮುಷ್ಟಿಯಿಂದ ಮೂಗಿಗೆ ಗುದ್ದಿದಾಗ ಅಲ್ಲಿ ಹೊಲಿಗೆ ಹಾಕಿರುತ್ತಾರೆ . ಚಾಸಾ-11 ರವರಿಗೆ ಆರೋಪಿತರೊಬ್ಬರು ಕ್ರಿಕೇಟ್ ಬ್ಯಾಟ್ ನಿಂದ ಕೈಗೆ ಹೊಡೆದರು . ನನ್ನ ತಂದೆಗೆ ಆರೋಪಿ ಮಕ್ ಬುಲ್ ಲಾಂಗ್ ನಿಂದ ಹೊಡೆದು ಎಡಗೈ ಹೆಬ್ಬೆರಳು ಮತ್ತು ತೋರು ಬೆರಳಿನ ಮಧ್ಯದ ಭಾಗಕ್ಕೆ ಹೊಡೆದನು . ನನ್ನ ತಂದೆಗೆ ಸದರಿ ಸ್ಥಳದಲ್ಲಿ ಕಟ್ ಆಗಿದ್ದು ಹೊಲಿಗೆ ಹಾಕಿರುತ್ತಾರೆ .

ಕುಳ್ಳಾರಫೀ ಮತ್ತು ಇಲಿಯಾಸ್ ಇವರು ನಮ್ಮ ತಂದೆ ಓಪಿಡಿಯಲ್ಲಿರುವಾಗ ನೀವು ಹೇಗೆ ಜೀವನ ಮಾಡುತ್ತೀರಿ ಎಂದು ಸಾಯಿಸಿ ಬಿಡುತ್ತೇನೆ ಎಂದು ಹೆದರಿಕೆ ಹಾಕಿರುತ್ತಾನೆ . ಘಟನೆಯಾದ ಎರಡು ದಿನಗಳ ನಂತರ ಪೊಲೀಸರು ಬಂದಿದ್ದು ಅವರಿಗೆ ಘಟನೆಯ ಸಮಯದಲ್ಲಿ ನನ್ನ ತಂದೆ , ತಾಯಿ ಧರಿಸಿದ್ದ ಬಟ್ಟೆಗಳನ್ನು ಕೊಟ್ಟಿರುತ್ತೇನೆ . ಆರೋಪಿತರು ನಮ್ಮ ವಾಹನಗಳನ್ನು ಹಾನಿಗೀಡು ಮಾಡಿದ್ದು ಪೊಲೀಸರು ಸದರಿ ವಾಹನಗಳನ್ನು ಮತ್ತು ಸ್ಥಳವನ್ನು ಪರಿಶೀಲನೆ ಮಾಡಿರುತ್ತಾರೆ .

ಪೊಲೀಸರು ಸ್ಥಳದಲ್ಲಿದ್ದ ಹಾಕಿಬ್ಯಾಟ್ , ಸ್ಟಿಕ್ ಮತ್ತು ಮಚ್ಚು ಲಾಂಗ್ ಗಳನ್ನು ಜಪ್ತುಗೊಳಿಸಿದ್ದು ಹಾಗೂ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಕಾಟನ್‌ನಲ್ಲಿ ಸಂಗ್ರಹಿಸಿರುತ್ತಾರೆ . ಸಾಕ್ಷಿಯೂ ಸ್ಥಳ ಪಂಚನಾಮೆ ಹಾಗೂ ನಕಾಶೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು , ಪಂಚನಾಮೆಯನ್ನು ನಿಪಿ-4 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು . ಸಾಕ್ಷಿಯೂ ನಕಾಶೆಯಲ್ಲಿರುವ ಸಹಿಯನ್ನು ನೋಡಿ

ಗುರುತಿಸಿದ್ದು ಅದರಲ್ಲಿ ನಕಾಶೆಯನ್ನು ನಿಪಿ-5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಜಪ್ತುಗೊಳಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯೂ ಮು.ಮಾ-1 ರಿಂದ 6 ನ್ನು ನೋಡಿ ಗುರುತಿಸಿರುತ್ತಾರೆ . ಮು.ಮಾ-7 ರಿಂದ 11 ರ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯೂ ಸದರಿ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ .

ಮು.ಮಾ-7 ರಿಂದ 11 ರ ವಸ್ತುಗಳನ್ನು ಜಪ್ತು ಮಾಡುವ ಕಾಲಕ್ಕೆ ಪೊಲೀಸರು ಪಂಚನಾಮೆಯನ್ನು ಸಾಯಂಕಾಲದ ಸಮಯದಲ್ಲಿ ಮಾಡಿರುತ್ತಾರೆ . ಸಾಕ್ಷಿಯೂ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು . ಸದರಿ ಘಟನೆಯನ್ನು ನಾನು ನಮ್ಮ ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರುವುದರಿಂದ ನೋಡಿರುತ್ತೇನೆ . ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ .

ಪೊಲೀಸರು ಘಟನೆಯಾದ ನಂತರ ನನ್ನನ್ನು ವಿಚಾರಿಸಿರುತ್ತಾರೆ . ನಾನು ಘಟನೆಯಾದ ನಂತರ ನ್ಯಾಯಾಲಯದಲ್ಲಿ ಹಾಜರಾಗಿ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ . ಸದರಿ ಹೇಳಿಕೆಯನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ-7(ಎ) ಮತ್ತು 7(ಬಿ) ಎಂದು ಗುರುತಿಸಲಾಯಿತು . ನಮ್ಮ ತಂದೆಯವರು ಆರೋಪಿ ಮಕ್ ಬುಲ್ ಮರಳು ತುಂಬಿದ ಟ್ರ್ಯಾಕ್ಟರ್ ನ್ನು ನಿಲ್ಲಿಸಿದ ಮೇರೆಗೆ ಈ ಘಟನೆಯಾಗಿರುತ್ತದೆ .

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ . 500 ಖರ್ಚಿನೊಂದಿಗೆ ಮುಂದೂಡಲಾಯಿತು .</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 18-2022**

ಪಿ.ಡಬ್ಲುಃ 4 ಸಿಡಬ್ಲುಃ 10

ಸಾಕ್ಷಿಯ ಹೆಸರು : ವಿಜಯ್ ಕುಮಾರ್

ತಂದೆ ಹೆಸರು : ಎ . ಕೆ . ವೆಂಕಟಸ್ವಾಮಿ

ವಯಸ್ಸು : 17 ವರ್ಷ

ವೃತ್ತಿ : ವಿದ್ಯಾರ್ಥಿ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 10-08-2022

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಚಾಸಾ-1 ನನ್ನ ತಂದೆ . ಚಾಸಾ-8 ನನ್ನ ತಾಯಿ . ಚಾಸಾ-9 ಮತ್ತು 11 ನನ್ನ ಸಹೋದರರು . ಚಾಸಾ-12 ನನ್ನ ಚಿಕ್ಕಮ್ಮ . ಚಾಸಾ-13 ನನ್ನ ಚಿಕ್ಕಪ್ಪ . ನಾವೆಲ್ಲರೂ ಬಳ್ಳಾರಿಯ ಮಿಲ್ಲರ್ ಪೇಟೆಯಲ್ಲಿ ವಾಸ ಮಾಡುತ್ತೇವೆ . ನನಗೆ ಆರೋಪಿತರೆಲ್ಲರೂ ಪರಿಚಯ , ಅವರು ನಮ್ಮ ಮನೆಯ ಮುಂದಿರುವ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ .

ದಿಃ 29-11-2021 ರಂದು ನನ್ನ ತಂದೆಗೆ ಆರ್ . ಐ ಪ್ರಭಾರಿ ಕೆಲಸ ಕೊಟ್ಟಿದ್ದ ಮೇರೆಗೆ ನನ್ನ ತಂದೆ ರಾಃ 8-00 ಗಂಟೆಗೆ ಮನೆಯಿಂದ ಹೊರಟರು , ಅಲ್ಲಿ ನಮ್ಮ ತಂದೆ ಮರಳಿನ ಟ್ರ್ಯಾಕ್ಟರ್ ನ್ನು ಹಿಡಿದಿದ್ದರು . ಸದರಿ ಟ್ರ್ಯಾಕ್ಟರ್ ಗಳು ಆರೋಪಿತರಿಗೆ ಸಂಬಂದಿಸಿದವುಗಳಾಗಿದ್ದವು . ನನ್ನ ಟ್ರ್ಯಾಕ್ಟರನ್ನು ಹಿಡಿಯಲು ಧೈರ್ಯ ಏನು ಎಂದು ನಮ್ಮ ತಂದೆಗೆ ಹೆದರಿಸಿದ್ದರು . ನನ್ನ ತಂದೆ ಮಾರನೆಯ ದಿನ ಬೆಳಗಿನ ಜಾವ 3-00 ಗಂಟೆಗೆ ಮನೆಗೆ ಬಂದರು .

ದಿಃ 01-12-2021 ರಂದು ರಾಃ 8-00 ರಿಂದ 8-30 ರ ಸಮಯದಲ್ಲಿ ನಾನು ಟ್ಯೂಷನ್ ಮುಗಿಸಿಕೊಂಡು ಮನೆಗೆ ಬಂದಾಗ ನಮ್ಮ ಮನೆಯ ಮುಂದೆ ಬಹಳ ಜನ ಸೇರಿದ್ದರು . ಸೇರಿದ ಜನರ ಕೈಗಳಲ್ಲಿ ಮಾರಕಾಸ್ತ್ರಗಳು ಇದ್ದು ಹಲ್ಲೆ ಮಾಡಲು ಬಂದಿದ್ದರು . ಮಕ್ ಬುಲ್ ಇತನು ನಮ್ಮ ತಂದೆಗೆ ಎಡಗೈ ತೋರ್ ಬೆರಳು ಮತ್ತು ಹೆಬ್ಬೆರಳಿನ ಮಧ್ಯದಲ್ಲಿ ಮಚ್ಚುಗತ್ತಿಯಿಂದ ಹೊಡೆದಿರುತ್ತಾನೆ . ನಮ್ಮ ಅಣ್ಣ ಮತ್ತು ತಾಯಿಗೆ ಕೈಗಳಿಗೆ ಮಚ್ಚು ಗತ್ತಿಯಿಂದ ಗಾಯಗಳಾಗಿರುತ್ತವೆ. ನಮ್ಮ ಅಣ್ಣನಿಗೆ ಹೊಡೆಯಲು ಬಂದಾಗ ನಮ್ಮ ತಾಯಿ

ಕೈ ಹಾಕಿದ್ದಕ್ಕಾಗಿ ಗಾಯವಾಗಿರುತ್ತದೆ . ನನಗೆ ಕೈ ಪಂಚ್ ನಿಂದ ಮೂಗಿಗೆ ಹೊಡೆದಿದ್ದು ರಕ್ತಗಾಯವಾಗಿತ್ತು . ನಮ್ಮ ತಮ್ಮನಿಗೆ ಆರೀಫ್ ಮತ್ತು ಅಮಿದ್ ಕೈಕಾಲುಗಳಿಂದ ಹೊಡೆದಿರುತ್ತಾರೆ .

ಕುಳ್ಳಾ ರಫೀಕ್ ಇತನು ನನ್ನ ತಂದೆಗೆ ಎದೆಯ ಕಾಲರ್ ನ್ನು ಹಿಡಿದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ . ಈ ಜಗಳ ಬಿಡಿಸಲು ಬಂದ ಜನರಿಗೆ ರಫೀಕ್ ಮತ್ತು ಇಲಿಯಾಸ್ ಇವರು ಬೆದರಿಕೆ ಹಾಕಿದರು . ರಾಘವೇಂದ್ರ , ವೆಂಕಟೇಶ್ , ಅಜಿಮ್ ಇವರೆಲ್ಲರೂ ಬಂದು ಜಗಳ ಬಿಡಿಸಿ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು . ಇಲಿಯಾಸ್ ಇತನು ನನ್ನ ತಂದೆಗೆ ಚಿಕಿತ್ಸೆ ಕೊಡುವ ಸಮಯದಲ್ಲಿ ತಹಶೀಲ್ದಾರ್ ಮತ್ತು ಎ . ಸಿ ಅವರ ಸಮಕ್ಷಮ ಬೆದರಿಕೆ ಹಾಕಿರುತ್ತಾನೆ .

ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಮಚ್ಚು ಗಳನ್ನು ಮತ್ತು ಬ್ಯಾಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯೂ ಮು.ಮಾ-1 ರಿಂದ 6 ರನ್ನು ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಆವರಣದಲ್ಲಿರುವ ಇನ್ನೊಂದು ನ್ಯಾಯಾಲಯದಲ್ಲಿ ಘಟನೆಯಾದ ಒಂದು ಅಥವಾ ಒಂದೂವರೆ ತಿಂಗಳಿನಲ್ಲಿ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ . ಆರೋಪಿತರು ನಮಗೆ ಸಂಬಂದಿಸಿದ 3 ದ್ವಿಚಕ್ರ ವಾಹನಗಳನ್ನು ಜಖಂಗೊಳಿಸಿರುತ್ತಾರೆ . ಸಾಕ್ಷಿಯೂ ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರಡಿಯಲ್ಲಿ ಕೊಟ್ಟ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 8(ಬಿ) ಎಂದು ಗುರುತಿಸಲಾಯಿತು . ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿಯೂ ಮು.ಮಾ-7 ರಿಂದ 11 ರ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ .

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ . 500 ಖರ್ಚಿನೊಂದಿಗೆ ಮುಂದೂಡಲಾಯಿತು .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 18-2022**

ಪಿ.ಡಬ್ಲುಃ 5 ಸಿಡಬ್ಲುಃ12

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ ಚಂದ್ರಕಲಾ |
| ಗಂಡನ ಹೆಸರು | : | ವೆಂಕಟೇಶ್ |
| ವಯಸ್ಸು | : | 34 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 10-08-2022

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಚಾಸಾ-1 ನನ್ನ ಬಾವ . ಚಾಸಾ-9 ರಿಂದ 11 ರವರು ಚಾಸಾ-1 ರವರ ಮಕ್ಕಳು . ಚಾಸಾ-13 ನನ್ನ ಗಂಡ . ನಾವೆಲ್ಲರೂ ಬಳ್ಳಾರಿಯ ಮಿಲ್ಲರ್ ಪೇಟೆಯಲ್ಲಿ ವಾಸವಿರುತ್ತೇವೆ . ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಮನೆಯ ಎದುರು ಮನಯಲ್ಲಿ ವಾಸವಿರುತ್ತಾರೆ. ಚಾಸಾ-1 ರವರು ಗ್ರಾಮಲೆಕ್ಕಾಧಿಕಾರಿಯಾಗಿರುತ್ತಾರೆ .

ದಿಃ 30-11-2021 ರಂದು ಚಾಸಾ-1 ರವರು ಆರೋಪಿತರಿಗೆ ಸಂಬಂದಿಸಿದ ಮರುಳು ಟ್ರ್ಯಾಕ್ಟರನ್ನು ಜಪ್ತಿಗೊಳಿಸಿದ ಕಾರಣಕ್ಕಾಗಿ ಮಧ್ಯ ರಾತ್ರಿಃ 2-00 ಗಂಟೆ ಸಮಯದಲ್ಲಿ ಮಕ್ ಬುಲ್ ಆರೋಪಿಯೂ ಚಾಸಾ-1 ರವರಿಗೆ ನಮ್ಮ ವಾಹನ ಏಕೆ ಜಪ್ತಿಗೊಳಿಸಿರುತ್ತೀಯಾ ಎಂದು ದಮ್ಕಿ ಕೊಟ್ಟಿರುತ್ತಾರೆ .

ದಿಃ 01-12-2021 ರಂದು ಮಕ್ ಬುಲ್ , ತೌಸಿಫ್ , ರಫೀಕ್ , ಇಲಿಯಾಸ್ , ಬೀಬೀಜಾನ್ , ಅಪ್ಸರಾ , ತಸ್ಲಿಮ್ , ಷನಾಜ್ , ಸೋಫಿಯಾ , ಆರೀಫ್ , ಮೊಹಮ್ಮದ್ ಅಮಿದ್ ಇವರೆಲ್ಲಾ ಕೈಗಳಲ್ಲಿ ಮಚ್ಚುಗತ್ತಿ , ಹಾಕಿಸ್ಟಿಕ್ , ಬ್ಯಾಟ್‌ಗಳನ್ನು ಹಿಡಿದುಕೊಂಡು ನಮ್ಮ ಮನೆಗೆ ರಾಃ 8-00 ಗಂಟೆಗೆ ಬಂದರು . ಮಕ್ ಬುಲ್ ಇತನು ಚಾಸಾ-1 ರವರಿಗೆ ಮಚ್ಚುಗತ್ತಿಯಿಂದ ಹೊಡೆಯಲು ಬಂದಾಗ ಚಾಸಾ-1 ರವರ ಎಡಗೈ ಹೆಬ್ಬೆರಳು ಮತ್ತು ತೋರ್ ಬೆರಳಿನ ಮಧ್ಯದಲ್ಲಿ ತಾಗಿ ಕತ್ತರಿಸಿರುತ್ತದೆ . ಚಾಸಾ-8 ರವರಿಗೆ ಬಲಗೈ ಮಧ್ಯದ ಬೆರಳಿಗೆ ತೌಸಿಫ್ ನು ಮಚ್ಚಿನಿಂದ ಹಾಕಿದ ಅದು ಬೆರಳಿಗೆ ತಾಗಿ ಗಾಯವಾಗಿರುತ್ತದೆ .

ಚಾಸಾ-9 ರವರಿಗೆ ಬಲಗೈಗೆ ಮಚ್ಚುಗತ್ತಿಯಿಂದ ಬಿದ್ದು ಗಾಯವಾಗಿರುತ್ತದೆ . ಇಲಿಯಾಸ್ ಮತ್ತು ರಫೀಕ್ ಇವರು ಚಾಸಾ-1 ರವರ ಶರ್ಟ್ ಕಾಲರನ್ನು ಹಿಡಿದುಕೊಂಡು ಬೈದರು . ತಸ್ಲಿಮ್ , ಅಪ್ಸರಾ , ಷನಾಜ್ , ಸೋಫೀಯಾ ಇವರೆಲ್ಲಾ ಸೇರಿ ನನಗೆ ಮತ್ತು ನಮ್ಮ ಅಕ್ಕನಿಗೆ ಕೈಗಳಿಂದ ಹೊಡೆದು ಚಾಸಾ-8 ರವರ ಕೊರಳಿನಲ್ಲಿದ್ದ 5 ತೊಲೆ ಚೈನನ್ನು ಹಾಗೂ ನನ್ನ 2 ತೊಲೆ ಚೈನ್ ಹಾಗೂ ಕಿವಿ ರಿಂಗ್ ಗಳನ್ನು ಕಿತ್ತುಕೊಂಡರು . 3 ದ್ವಿಚಕ್ರ ವಾಹನಗಳನ್ನು ಜಖಂ ಮಾಡಿರುತ್ತಾರೆ .

ರಾಘವೇಂದ್ರ , ಮಾರುತಿ, ಸಾದಿಕ್ , ರಿಜು ಮತ್ತು ಅಜೀಮ್ ಇವರು ನಮ್ಮನ್ನು ಆಸ್ಪತ್ರ ಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿರುವಾಗ ಇಲಿಯಾಸ್ ಮತ್ತು ರಫೀಕ್ ಇವರು ಎ .ಸಿ ಮತ್ತು ತಹಶೀಲ್ದಾರ್ ಬಳ್ಳಾರಿ ಇವರು ಇರುವಾಗ ಇವೇನು ಮಾಡಿಕೊಳ್ಳುತ್ತೀರಿ ಎಂದು ಚಾಸಾ-1 ರವರಿಗೆ ಹೆದರಿಕೆ ಹಾಕಿದರು .

ನನ್ನ ಎಡಗೈಗೆ ಶಹನಾಜ್ ಕಟ್ಟಿಗೆಯಿಂದ ಹೊಡೆದಿದ್ದರಿಂದ ಗಾಯವಾಗಿತ್ತು. ಸಾಕ್ಷಿಯೂ ಮು.ಮಾ-1 ರಿಂದ 6 ರನ್ನು ನೋಡಿ ಗುರುತಿಸಿರುತ್ತಾರೆ .ದಿಃ 31-12-2021 ರಂದು ನ್ಯಾಯಾಲಯದಲ್ಲಿ ನ್ಯಾಯಾಧೀಶರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ . ಸಾಕ್ಷಿಯೂ ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಮತ್ತು ನಿಪಿ-9(ಬಿ) ಎಂದು ಗುರುತಿಸಲಾಯಿತು . ನಮ್ಮ ಮನಯ ಹತ್ತಿರ ಬಂದು ಜಗಳಮಾಡಿದವರೆಲ್ಲಾ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ , ಸಾಕ್ಷಿಯೂ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ . ಮು.ಮಾ7 ರಿಂದ 11 ರ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ .

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ರೂ . 500 ಖರ್ಚಿನೊಂದಿಗೆ ಮುಂದೂಡಲಾಯಿತು .</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ